

# ಆಸೆಗೆ ಮಿತಿ ಇಲ್ಲ!

ಒಮ್ಮೆ ಒಬ್ಬ ದಾರಿಹೋಕ ಮಟ ಮಟ ಮಧ್ಯಾಹ್ನ ಬಿಸಿಲಿನಲ್ಲಿ ಕಾಲಿಗೆ ಚಪ್ಪಲಿಯೂ ಇಲ್ಲದೆ ಮರಳುಗಾಡಿನಲ್ಲಿ ಕಷ್ಟಪಟ್ಟು ನಡೆದುಕೊಂಡು ಹೋಗುತಿದ್ದ. ಆಗ ಅವನ ಪಕ್ಕದಲ್ಲಿ ಒಬ್ಬ ಕುದುರೆ ಸವಾರ ಕಾಲಿಗೆ ಚಪ್ಪಲಿ ತೊಟ್ಟು ಕೈಯಲ್ಲಿ ಛತ್ರಿಯನ್ನು ಹಿಡಿದು ಸಾಗುತಿದ್ದ. ಅವನನ್ನು ನೋಡಿದ ದಾರಿಹೋಕನಿಗೆ ಇವನು ನಡೆದುಕೊಂಡು ಸಹ ಹೋಗುತ್ತಿಲ್ಲ. ಇವನಿಗೆ ಯಾಕೆ ಚಪ್ಪಲಿ ಎಂದುಕೊಂಡು ಅವನ ಹತ್ತಿರ ಬಂದ.

‘ಅಣ್ಣಾ, ನೀನು ಕುದುರೆ ಸವಾರಿ ಮಾಡುತ್ತಿದ್ದೀಯಾ. ಆದ್ದರಿಂದ ನಿನಗೆ ನೀನು ಹಾಕಿಕೊಂಡಿರುವ ಚಪ್ಪಲಿಯ ಅವಶ್ಯಕತೆ ಇಲ್ಲ. ನೀನು ನಿನ್ನ ಚಪ್ಪಲಿಯನ್ನು ನನಗೆ ಯಾಕೆ ಕೊಡಬಾರದು?’ ಎಂದು ಆಸೆಯಿಂದ ಕೇಳಿದ. ಸವಾರನೂ 'ಹೌದಲ್ವೇ, ನನಗ್ಯಾಕೆ ಚಪ್ಪಲಿ ಬೇಕು' ಅಂದ್ಕೊಂಡು ಚಪ್ಪಲಿಯನ್ನು ಅವನಿಗೆ ಕೊಟ್ಟು ಸಾಗಿದನು.

ಸ್ವಲ್ಪ ದೂರ ಹೋಗುವಷ್ಟರಲ್ಲೇ ದಾರಿಹೋಕ ಚಪ್ಪಾಳೆ ತಟ್ಟಿ ಸವಾರನನ್ನು ಕರೆದನು. ಅವನು ಏನೆಂದು ಕೇಳಲು ‘ಅಣ್ಣಾ, ನೀವು ಚಪ್ಪಲಿ ಕೊಟ್ಟು ಉಪಕಾರ ಮಾಡಿದಿರಿ. ನೀವು ಕುದುರೆ ಮೇಲೆ ವೇಗವಾಗಿ ಹೋಗುವುದರಿಂದ ನಿಮಗೆ ಆ ಛತ್ರಿಯೂ ಸಹ ಅಷ್ಟೇನೂ ಉಪಯೋಗಕ್ಕೆ ಬರುವುದಿಲ್ಲ ಎನಿಸುತ್ತದೆ. ನೀವು ನಡಕೊಂಡು ಹೋಗುವ ನನಗೆ ಛತ್ರಿಯನ್ನು ಕೊಟ್ಟರೆ ತುಂಬಾ ಉಪಯೋಗವಾಗುತ್ತದೆ’ ಎಂದ. ಆ ಸವಾರನು ಯೋಚಿಸಿ ‘ಹೌದು, ಅವನು ಹೇಳುವುದು ಸರಿಯಾಗಿಯೇ ಇದೆ. ನನಗಿಂತ ಅವನಿಗೆ ಹೆಚ್ಚು ಉಪಯೋಗವಾಗುತ್ತದೆ’ ಎಂದು ದಾರಿಹೋಕನಿಗೆ ಛತ್ರಿಯನ್ನು ಕೊಟ್ಟನು.

ಮತ್ತೆ ಸ್ವಲ್ಪ ದೂರ ಸಾಗುವಷ್ಟರಲ್ಲಿ ದಾರಿಹೋಕನ ಕೂಗು ಕೇಳಿ ಸವಾರ ಹತ್ತಿರ ಬಂದ.

‘ಸ್ವಾಮಿ, ಕುದುರೆಯ ಮೇಲೆ ನಾನು ಹೋದರೆ ಏನು ಅಥವಾ ನೀವು ಹೋದರೆ ಏನು? ನೀವು ಕುದುರೆಯನ್ನು ಸಹ ನನಗೆ ಕೊಟ್ಟು ಬಿಡಿ’ ಎಂದ. ಕುದುರೆ ಸವಾರನು ಕೆಳಗಿಳಿದು ಅವನಿಗೆ ತನ್ನಲಿದ್ದ ಚಾಟಿಯಿಂದ ಒಂದೇ ಸಮನೆ ಏಟು ಕೊಟ್ಟ.

ದಾರಿಹೋಕನು ನೋವಾದರೂ ನಗಲು ಶುರುಮಾಡಿದ್ದನ್ನು ಕಂಡು ‘ಏನಯ್ಯಾ, ನಾನು ಹೊಡೆಯುತ್ತಿದ್ದರೂ ನೀನು ಸುಮ್ಮನೆ ನಗುತ್ತಲೇ ಇದ್ದೀಯಾ?’ ಎಂದ ಸವಾರ.

ಆಗ ದಾರಿಹೋಕ ‘ನಾನು ಒಂದು ವೇಳೆ ನಿಮ್ಮನ್ನು ಕುದುರೆ ನನಗೆ ಬೇಕು ಅಂತ ಕೇಳದೆ ಇದ್ದರೆ ನಾನು ಜೀವಂತ ಇರುವವರೆಗೂ ಇದೊಂದು ಪ್ರಶ್ನೆ ನನಗೆ ಕಾಡುತ್ತಲೇ ಇರುತಿತ್ತು– ಅಕಸ್ಮಾತ್ ನೀವು ನನಗೆ ಕುದುರೆ ಕೊಟ್ಟು ಬಿಡುತ್ತಿದ್ದಿರೇನೊ ಅಂತ..! ಈಗ ಮನಸ್ಸಿಗೆ ನಿರಾಳವಾಯ್ತು. ಮತ್ತು ನನ್ನ ಆಸೆಯ ಮಿತಿ ಎಷ್ಟು ಅಂತ ಮನದಟ್ಟಾಯ್ತು’ ಎಂದ. ಹೀಗೂ ಮನುಷ್ಯರು ಇರ್ತಾರಾ ಅಂತ ಆಶ್ಚರ್ಯಪಟ್ಟು ತನ್ನ ಪ್ರಯಾಣ ಬೆಳೆಸಿದನು ಕುದುರೆ ಸವಾರ.

■ ವಿ.ವಿಜಯೇಂದ್ರ ರಾವ್